**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಓ.ಎಸ್.ನಂ.219/2019**

**ದಿನಾಂಕಃ31.07.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ1

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಹೆಚ್.ಎನ್.ಎಸ್. ವಕೀಲರಿಂದಃ-**

ನಾನು ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಮುಖ್ಯ ವಿಚಾರಣೆಯೊಂದಿಗೆ ದಿಃ04.02.2019 ರ ಕ್ರಯಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು, ಬೀರೂರು ಪುರಸಭೆಗೆ ನೀಡಿರುವ ಅರ್ಜಿಯ ದೃಢೀಕೃತ ನಕಲನ್ನು ನಿಪಿ-2 ಎಂದು, 4 ಛಾಯಾಚಿತ್ರಗಳು ಮತ್ತು ಒಂದು ಸಿಡಿಯನ್ನು ಹಾಜುರಪಡಿಸಿರುತ್ತೇನೆ, ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ ನಿಪಿ-7 ಎಂದು, ಬೀರೂರು ಪುರಸಭೆಯವರು ನೀಡಿರುವ ತಿಳುವಳಿಕೆ ಪತ್ರದ ದೃಢೀಕೃತ ನಕಲನ್ನು ನಿಪಿ-8 ಎಂದು ಕಂದಾಯ ಪಾವತಿಯ ಬಗ್ಗೆ 2 ರಶೀದಿಗಳ ದೃಢೀಕೃತ ನಕಲನ್ನು ನಿಪಿ-9 ಮತ್ತು ನಿಪಿ-10 ಎಂದು, ಪ್ರತಿವಾದಿಯ ಆಧಾರ್ ಕಾರ್ಡನ ದೃಢೀಕೃತ ನಕಲನ್ನು ನಿಪಿ-11 ಎಂದು, ಪ್ರತಿವಾದಿಯು ಬೀರೂರು ಪುರಸಭೆಗೆ ನೀಡಿರುವ ಅರ್ಜಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು, ಬೀರೂರು ಪುರಸಭೆಗೆ ನೀಡಿರುವ ನಿವೇಶನ ಚಕ್ಕುಬಂದಿಯ ದೃಢೀಕೃತ ನಕಲನ್ನು ನಿಪಿ-13 ಎಂದು, ನಿವೇಶನ ವಿತರಣಾ ಪತ್ರದ ದೃಢೀಕೃತ ನಕಲನ್ನು ನಿಪಿ-14 ಎಂದು, ರಶೀದಿಯ ದೃಢೀಕೃತ ನಕಲನ್ನು ನಿಪಿ-15 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)

3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.